3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಚನ್ನರಾಯಪಟ್ಟಣ

**CC 723/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಮುಬಾರಕ್ | **C.W –3** |
| ತಂದೆಯ ಹೆಸರು | ಃ | ಅಲ್ತಾಫ್ | **P.W –1** |
| ವಯಸ್ಸು | ಃ | 26 ವರ್ಷ | |
| ಉದ್ಯೋಗ | ಃ | ಕೂಲಿ ಕೆಲಸ | **ಪ್ರಮಾಣ ವಚನ ಬೋಧಿಸಲಾಯಿತು.** |
| ವಾಸ | ಃ | ಶ್ರೀನಿವಾಸಪುರ | ದಿನಾಂಕಃ **16.02.2024** |

---

ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

ಚಾ ಸಾ 2 ರವರ ಪರಿಚಯವಿದೆ.

ಸಾಕ್ಷಿಗೆ 2 ಅಮಾನತ್ತು ಪಂಚನಾಮೆಗಳನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿ ಪಿ 1 ಮತ್ತು 2 ಎಂದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ ಪಿ 1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು.

ನಾನು ಸದರಿ ಸಹಿಯನ್ನು 2021 ರಲ್ಲಿ ಹಿರಿಸಾವೆ ಪೋಲೀಸ್ ಠಾಣೆಯಲ್ಲಿ ಎರಡು ಮಹಜರ್ ಗೆ ಸಹಿಯನ್ನು ಮಾಡಿರುತ್ತೇನೆ. ಆ ಸಮಯದಲ್ಲಿ ಚಾ ಸಾ 2 ರವರು ಮತ್ತು ಆರೋಪಿ ಹಾಜರಿದ್ದರು. ನಮ್ಮ ಮುಂದೆ ಪೋಲೀಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರ್ಕಾರಿ ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

**ಪಾಟೀ ಸವಾಲುಃ** ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕ *07.11.2021* ರಂದು ಮಧ್ಯಾಹ್ನ *01.30* ಗಂಟೆ ಸಮಯದಲ್ಲಿ

ನಾನು ಮತ್ತು ಚಾ ಸಾ *2* ಸ್ವಂತ ಕೆಲಸದ ನಿಮಿತ್ತ ಚನ್ನರಾಯಪಟ್ಟಣದ ಕಡೆಗೆ ಹೋಗುವಾಗ ಚನ್ನರಾಯಪಟ್ಟಣ ಹೆ ಎನ್ ಪುರ ರಸ್ತೆ ಹೌಸಿಂಗ್ ಬೋರ್ಡ್ ಕಾಲೋನಿ ಬಸ್ ತಂಗುದಾಣ ಹತ್ತಿರ ಹಿರಿಸಾವೆ ಪೋಲೀಸ್ ಠಾಣೆ ಹತ್ತಿರ ಚಾ ಸಾ *13*ರವರು ನಮ್ಮನ್ನು ಹಿರಿಸಾವೆ ಪೊಲೀಸ್ ಠಾಣೆಗೆ ಕರೆದು ಹಿರಿಸಾವೆ ಪೋಲೀಸ್ ಠಾಣೆಯ ಹಾಲ್ ನ ಮಧ್ಯದಲ್ಲಿ ಆರೋಪಿಯು ದಿನಾಂಕ *22.04.2021*ರಂದು ನನ್ನ ಚಿಕ್ಕಮ್ಮ ಚಾ ಸಾ *1*ರವರ ಮನೆಯಲ್ಲಿ ಸಿಲ್ವರ್ ಡಬ್ಬದಲ್ಲಿ ಇಟ್ಟಿದ್ದ ಒಂದು ಜೊತೆ ಓಲೆ ಮತ್ತು *1* ಚಿನ್ನದ ಉಂಗುರ ಮತ್ತು *80,000/-* ನಗದು ಹಣವಿದ್ದು, ಆ ನಗದು ಹಣ ಮತ್ತು ಒಡವೆಗಳನ್ನು ನಮ್ಮ ಬಡತನಕ್ಕೆ ಉಪಯೋಗಕ್ಕೆ ಬರುತ್ತದೆ ಎಂದು ತಿಳಿದು ಅದನ್ನು ತೆಗೆದುಕೊಂಡು ಹೋಗಿ ನಮ್ಮ ಮನೆಗೆ ಬೇಕಾದ ಸಾಮ್ಗ್ರಿಗಳನ್ನು ತೆಗೆದುಕೊಂಡೆ. ಚಿನ್ನವನ್ನು ಲಾಕ್ ಡೌನ್ ಸಮಯದಲ್ಲಿ ಚನ್ನರಾಯಪಟ್ಟಣ ನಗರದ ಚನ್ನರಾಯಪಟ್ಟಣ- ಹೆಚ್ ಎನ್ ಪುರ ರಸ್ತೆಯಲ್ಲಿರುವ ಹೌಸಿಂಗ್ ಬೋರ್ಡ್ ನ ಬಸ್ ತಂಗುದಾಣದಲ್ಲಿ ನನಗೆ ಗೊತ್ತಿಲ್ಲದ ದಾರಿ ಹೋಕರಿಗೆ ಮಾರಿ ಅದರಲ್ಲಿ ಬಂದ *15,000/-* ರೂ. ನಗದು ಹಣದಲ್ಲಿ *5500* ರೂ. ಗಳನ್ನು ನನ್ನ ಸ್ವಂತ ಖರ್ಚಿಗೆ ಉಪಯೋಗಿಸಿಕೊಂಡಿರುತ್ತೇನೆ. ಉಳಿದ ಒಟ್ಟು *9500/-* ರೂ. ನಗದು ಹಣವನ್ನು ಹಾಜರುಪಡಿಸುತ್ತೇನೆ ಎಂದು ತಿಳಿಸಿದ ಮೇರೆಗೆ ನಮ್ಮಗಳ ಸಮಕ್ಷಮ ಅಜಮಾಯಿಸಿ ಮಾಡಲಾಗಿ *500* ರೂ. ಮುಖಬೆಲೆಯ *9* ನೋಟುಗಳನ್ನು ಪೋಲೀಸರು *04.30-5.30* ಗಂಟೆ ಸಮಯದಲ್ಲಿ ನನ್ನ ಮತ್ತು ಚಾ ಸಾ *2*ರವರ ಸಮಕ್ಷಮ ಅಮಾನತ್ತು ಮಹಜರ್ ಕ್ರಮ ಜರುಗಿಸಿ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿ ಪಿ *1*ಕ್ಕೆ ನಾನು ಮತ್ತು ಚಾ ಸಾ *2*ರವರು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ದಿನಾಂಕ *07.11.2021*ರಂದು ಚನ್ನರಾಯಪಟ್ಟಣ ಹೆಚ್ ಎನ್ ಪುರ ರಸ್ತೆಯಲ್ಲಿರುವ ಹೌಸಿಂಗ್ ಬೋರ್ಡ್ ಕಾಲೋನಿಯ ಬಸ್ ತಂಗುದಾಣದ ಮುಂದೆ ಪೋಲೀಸರು ನಮ್ಮನ್ನು ಕರೆದುಕೊಂಡು ಹೋಗಿ ಆರೋಪಿಯು ಇದೇ ಸ್ಥಳದಲ್ಲಿ ನಾನು ಒಂದು ಜೊತೆ ಓಲೆ ಮತ್ತು *1* ಚಿನ್ನದ ಉಂಗುರವನ್ನು ಯಾರೋ ದಾರಿಹೋಕರಿಗೆ *15,000* ರೂಪಾಯಿಗಳಿಗೆ ಮಾರಾಟ ಮಾಡಿರುತ್ತೇನೆ ಎಂದು ಸ್ಥಳವನ್ನು ತೋರಿಸಿದ ಮೇರೆಗೆ ಪೋಲೀಸರು ಮಧ್ಯಾಹ್ಣ *02.00 - 03.00* ಗಂಟೆ ಸಮಯದಲ್ಲಿ ನನ್ನ ಮತ್ತು ಚಾ ಸಾ *2*ರವರ ಸಮಕ್ಷಮದಲ್ಲಿ ಮಹಜರ್ ಕ್ರಮ

ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ *07.11.2021*ರಂದು *01.30* ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ಸ್ನೇಹಿತ ರಘುಗೌಡ ........................................................................ ..................................................................................................... ...................................... ಆರೋಪಿತೆ ಚೈತ್ರರವರು ತನ್ನ ಬಳಿಯಿದ್ದ *9500/–* ರೂ. ನಗದು ಹಣವನ್ನು ಹಾಜರುಪಡಿಸಿದ ಮೇರೆಗೆ ನಮ್ಮ ಸಮಕ್ಷಮ ಅಮಾನತ್ತುಪಡಿಸಿಕೊಂಡರು. ನಂತರ ನಾವುಗಳು ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ. ಆರೋಪಿ ಚೈತ್ರರವರನ್ನು ನೋಡಿರುತ್ತೇನೆ ಮತ್ತೆ ನೋಡಿದರೆ ಗುರುತಿಸುತ್ತೇನೆ . ಈ ಮೇಲೆ ಓದಿ ಹೇಳಿದಂತೆ ನಾನು ದಿನಾಂಕ *07.11.2021*ರಂದು ಹಿರಿಸಾವೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಸಂಪೂರ್ಣವಾಗಿ ಸಾಕ್ಷಿಗೆ ಓದಿ ಹೇಳಲಾಗಿ ಸಾಕ್ಷಿಯು ಸದರಿ ಹೇಳಿಕೆಯನ್ನು ಅಲ್ಲಗಳೆದಿರುವುದರಿಂದ ಸದರಿ ಹೇಳಿಕೆಯನ್ನು ನಿ ಪಿ *3* ಎಂದು ಗುರುತಿಸಲಾಯಿತು.

ಎಲ್ಲಾ ವಿಚಾರಗಳನ್ನು ತಿಳಿದುಕೊಂಡು ನಾನು ನಿ ಪಿ *1* ಮತ್ತು *2*ಕ್ಕೆ ಸ್ಥಳದಲ್ಲಿ ಸಹಿ ಮಾಡಿದ್ದರೂ ಸಹ ಮತ್ತು ನಿ ಪಿ *3*ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯವಾಗಲೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು** – ಸಾಕ್ಷಿಯು ಪ್ರತಿಕೂಲ ಸಾಕ್ಷಿಯಾದ್ದರಿಂದ ಪಾಟಿ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ .**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**Sd/-**
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.ಚನ್ನರಾಯಪಟ್ಟಣ